ಮತ್ತು ಹಿಂದಿ ಹಾಡುಗಳನ್ನೇ ಹಾಕುತ್ತಿದ್ದ. ಕನ್ನಡ ಹಾಡುಗಳನ್ನು ಹಾಕಿ ಎಂದು ಮೊದಲು ದನಿ ಎತ್ತಿದವಳು ವಿಭಾವರಿ. ಅವನು ಇವಳ ಮಾತೇ ಕೇಳಿಸಿಲ್ಲ ಎನ್ನುವ ಹಾಗೆ ಕೊಡವಿ ಹೋದಾಗ ಮಧುವಂತಿ ವ್ಯಾಯಾಮ ನಿಲ್ಲಿಸಿ ದನಿ ಏರಿಸಿದ್ದಳು. ಸಾವನಿ ಸಹ ಜೊತೆಯಾಗಿದ್ದಳು. ಕಲ್ಯಾಣಿ ಮರುದಿನ ಎರಡು ಕನ್ನಡ ಸೀಡಿಗಳನ್ನು ತಂದು ಎಲ್ಲರ ಮುಂದೆಯೇ ಕೊಟ್ಟು ಹಾಕಲು ಹೇಳಿದ್ದಳು. ಆ ಘಟನೆ ಇವರು ನಾಲ್ವರನ್ನೂ ಒಂದು ಕಳ್ಳುಬಳ್ಳಿಯಂತೆ ಬೆಸೆದಿತ್ತು. ಆಗಿನಿಂದ ಮೊದಲು ಯಾರೇ ಬಂದರೂ ಮಿಕ್ಕ ಮೂವರಿಗಾಗಿ ಕಾಯುವುದು, ಯಾರು ಮೊದಲೇ ವ್ಯಾಯಾಮ ಮುಗಿಸಿದರೂ ಮಿಕ್ಕ ಮೂವರಿಗೂ ಹೇಳಿ ಹೊರಡುವುದು ಅಭ್ಯಾಸವಾಗಿತ್ತು. ಎಲ್ಲರಿಗೂ ಎಲ್ಲರ ದೇಹದ ಕುಂದು ಕೊರೆ, ಎತ್ತರ, ತಗ್ಗುಗಳು ಚಿರಪರಿಚಿತ ಆಗಿದ್ದರೂ ಅದರಾಚೆಗೆ ಒಬ್ಬರು ಇನ್ನೊಬ್ಬರ ಬಗ್ಗೆ ತಿಳಿದುಕೊಂಡಿರುವುದು ಕಡಿಮೆಯೇ. ಇಂದು ಕಲ್ಯಾಣಿಯ ಹುಟ್ಟುಹಬ್ಬ, ಬೆಳಗ್ಗೆ ಕಲ್ಯಾಣಿ ಮಾತಿನ ನಡುವೆ ಅದನ್ನು ಹೇಳಿದಾಗ ನಿಂತ ನಿಲುವಿನಲ್ಲಿ ಮಧುವಂತಿ ಸಂಜೆ ಪಾರ್ಟಿ ಎಂದು ಘೋಷಿಸಿದ್ದಳು. ಅವಳು ಹಾಗೆಯೇ, ನಿರ್ಣಯಗಳನ್ನು ಥಟ್ಟನೆ ತೆಗೆದುಕೊಳ್ಳುತ್ತಿದ್ದಳು ಮತ್ತು ಅನಂತರ ಹೇಗಾದರೂ ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದಳು. ಯಾವ ನಿರ್ಧಾರವೂ ಶೇ 100 ಸರಿಯಾಗಿರುವುದಿಲ್ಲ, ತೆಗೆದುಕೊಳ್ಳಬೇಕು, ಆಮೇಲೆ ಅದನ್ನು ಸರಿಪಡಿಸಲು ಪ್ರಯತ್ನಿಸಬೇಕು ಎನ್ನುವುದು ಅವಳ ಧ್ಯೇಯವಾಕ್ಯ. ಸಂಜೆ 7ಕ್ಕೆ ರೆಡಿಯಾಗಿರಿ, ಇವರಿಬ್ಬರನ್ನೂ ಕರೆದುಕೊಂಡು ನಾನೇ ಬಂದು ಪಿಕ್ ಮಾಡುತ್ತೇವೆ ಎಂದು ಕಲ್ಯಾಣಿಗೆ ಹೇಳಿದವಳು 6.45ಕ್ಕೆ ಕರೆ ಮಾಡಿ, ನಿಮಗೇನು ಅಭ್ಯಂತರ ಇಲ್ಲದಿದ್ದರೆ ನಿಮ್ಮ ಮನೆಯಲ್ಲೇ ಸೇರೋಣವೇ, ಜೋರು ಮಳೆ ಬರುವ ಸೂಚನೆ ಇದೆ, ಟ್ರಾಫಿಕ್ ನರಕವಾಗುತ್ತದೆ ಎಂದಾಗ ಕಲ್ಯಾಣಿ ಏನೂ ಹೇಳಲು ತೋಚದೆ 'ಹೂ' ಅಂದಿದ್ದಳು. ಕಲ್ಯಾಣಿ ಖಾಸಗಿಯಾಗಿ ಇರುವಂತಹವಳು. ಐದು ವರ್ಷಗಳ ಹಿಂದೆ ಆ ಘಟನೆ ನಡೆದಾಗಿನಿಂದ ಅವಳ ಜೀವನವೇ ಪಲ್ಲಟವಾಗಿತ್ತು. ಅಲ್ಲಿಯವರೆಗಿನ ಎಲ್ಲಾ ಸ್ನೇಹ ಸಂಬಂಧಗಳನ್ನೂ ಬೇಕೆಂತಲೇ ಕತ್ತರಿಸಿಕೊಂಡಿದ್ದ ಅವಳು ಯಾವ ಹೊಸ ಸ್ನೇಹಕ್ಕೂ ತೆರೆದುಕೊಂಡಿರಲಿಲ್ಲ. ಸಾಧಾರಣವಾಗಿ ಮನೆಗೂ ಯಾರನ್ನೂ ಕರೆಯುತ್ತಿರಲಿಲ್ಲ. ಆದರೆ, ಮಧುವಂತಿ ಎನ್ನುವ ಮಹಾಪ್ರವಾಹವನ್ನು ತಡೆದುಕೊಳ್ಳುವುದು ಸುಲಭವಲ್ಲ! ಹಾಗಾಗಿಯೇ, ಕಲ್ಯಾಣಿಯ ಮನೆ ಇಂದು ಮೊದಲ ಬಾರಿ ಪಾರ್ಟಿಗೆ ಮೈತೆರೆದುಕೊಳ್ಳುತ್ತಲಿದೆ. ಕೈಯಲ್ಲಿ ವೈನ್ ಬಾಟಲಿ ಹಿಡಿದೇ ಬಂದಿದ್ದ ಮಧುವಂತಿ, ಬಂದೊಡನೆ ಪಾರ್ಟಿ ಪ್ರಾರಂಭಿಸಿಯೇ ಬಿಟ್ಟಿದ್ದಳು. ಅಷ್ಟು ಕಪ್ ಕಾಫಿ ಮಾಡದ ಕೆಲಸವನ್ನು ವೈನ್ ಮಾಡುತ್ತಿದೆ, ನಾಲ್ವರೂ ತಮ್ಮ ತಮ್ಮ ರಕ್ಷಣಾ ಕವಚಗಳನ್ನು ಕಳಚಲು ಅದು ನೆರವಾಗುತ್ತಿದೆ. ಆಗಲೇ ಮಧುವಂತಿ ಈ ಟ್ರೂತ್ ಆರ್ ಡೇರ್ ಪ್ರಸ್ತಾಪ ಇಟ್ಟಿದ್ದು. ಅದೊಂದು ಸ್ನೇಹಿತರ ನಡುವಿನ ಆಟ. ಎಲ್ಲರೂ ಸತ್ಯ ಹೇಳಲೇಬೇಕು, ಹೇಳುತ್ತಾರೆ ಎನ್ನುವುದೇ ಆಟದ ನಿಯಮ ಮತ್ತು ನಂಬಿಕೆ. ಗುಂಪಿನ ನಡುವೆ ಖಾಲಿ ಬಾಟಲನ್ನು ತಿರುಗಿಸುವುದು, ಬಾಟಲ್ ತಿರುಗುವುದನ್ನು ನಿಲ್ಲಿಸಿದಾಗ ಅದು ಯಾರ ಕಡೆಗೆ ಮೂತಿ ಮಾಡಿರುತ್ತದೆಯೋ ಅವರಿಗೆ ಎರಡು ಆಯ್ಕೆಗಳನ್ನು ಕೊಡಲಾಗುತ್ತದೆ. ಟ್ರೂಥ್ ಅಥವಾ ಡೇರ್. ಟ್ರೂಥ್ ಆರಿಸಿಕೊಂಡರೆ ಗುಂಪಿನಲ್ಲಿರುವವರು ಏನೇ ಪ್ರಶ್ನೆ ಕೇಳಲಿ ಉತ್ತರ ಕೊಡಬೇಕು, ಡೇರ್ ಆರಿಸಿಕೊಂಡರೆ ಅವರು ಹೇಳುವ ಯಾವುದೇ ಕೆಲಸ ಮಾಡಬೇಕು.

ಅಷ್ಟು ಹೊತ್ತಿಗಾಗಲೇ ಅವರು ಸೇರಿ ಎರಡು ಗಂಟೆಗಳಾಗಿದ್ದವು. ಜೇಪಿ ನಗರದ ಸೆರಗಲ್ಲಿ, ಹಳೆಯ ಕೆರೆಯ ಪಕ್ಕ ಎದ್ದಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 11ನೆಯ ಮಹಡಿಯ ಫ್ಲ್ಯಾಟ್‌ನಲ್ಲಿ ಕಲ್ಯಾಣಿಯ ಮನೆ. ಹಾಲ್‌ಗೆ ಅಂಟಿದಂತಿರುವ ಬಾಲ್ಕನಿ, ಎರಡರ ನಡುವೆ ಗಾಜಿನ ಬಾಗಿಲು. ಅದನ್ನು ತೆರೆದರೆ ಆಕಾಶವೇ ಸೂರು. ದೊಡ್ಡ ಹಾಲ್, ಒಂದು ಬದಿಗೆ ದ್ವೀಪದ ಮಾದರಿ ಅಡಿಗೆಮನೆ, ಇನ್ನೊಂದು ಕೊನೆಯಲ್ಲಿ ಗೋಡೆಯೇ ತಿರುವು ತೆಗೆದುಕೊಂಡ ಹಾಗೆ ಬೆಡ್‌ರೂಂ.